1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ

ಸಿ ಸಿ ನಂ	57/2025
ದೂರುದಾರ	ಪಿ.ಡಬ್ಲ್ಯೂ–1
ದಿನಾಂಕ	20–02–2026

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.
ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಂ ಪಿ ವಕೀಲರಿಂದಃ

1) ಆರೋಪಿಗೆ PMEGP scheme ನಲ್ಲಿ ಸಾಲವನ್ನು ಮಂಜೂರು ಮಾಡಿರುತ್ತೇವೆ. ಸದರಿ scheme ನಲ್ಲಿ ಸಾಲ ಪಡೆಯಬೇಕಾದರೆ ಮೊದಲು ಫಲಾನುಬವಿಗಳು ಸರಕಾರಕ್ಕೆ ಅರ್ಜಿ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. ಪ್ರಸ್ತುತ scheme ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲು ನೀಡಲಾಗುತ್ತದೆ ಎಂದರೆ ಸರಿ. ಆರೋಪಿಯು ನಿರುದ್ಯೋಗಿ ಇರುವ ಕಾರಣಕ್ಕೆ ಉದ್ಯೋಗ ಸಿಗಲಿ ಎಂದು ಸಾಲ ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿಯು ವ್ಯವಸಾಯ ಮಾಡಲು ಸಾಲ ಕೇಳಿದ್ದರಿಂದ ಮಂಜೂರು ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ PMEGP scheme ಉದ್ಯೋಗಸ್ಥರಿಗೆ ಮತ್ತು ಸ್ಥಿತಿವಂತರಿಗೆ ಅನ್ವಯ ಆಗುವುದಿಲ್ಲ ಎಂದರೆ ಸರಿಯಲ್ಲ. ನಿರುದ್ಯೋಗಿ ಮತ್ತು ಬಡವರಿಗೆ ಮಾತ್ರ ಅನ್ವಯ ಆಗುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನಿರುದ್ಯೋಗಿ ಮತ್ತು ಬಡವನಾಗಿದ್ದರಿಂದ ಸದರಿ ಸಾಲವು ಮಂಜೂರು ಆಗಿರುತ್ತದೆ ಎಂದರೆ ಸರಿ. ಸದರಿ ಸಾಲಕ್ಕೆ ಸರಕಾರವು ಬಾಧ್ಯತೆ ಹೊಂದಿರುತ್ತದೆ ಎಂದರೆ ಸರಿಯಲ್ಲ.

2) ಆರೋಪಿಗೆ ಸಾಲ ಮಂಜೂರು ಮಾಡುವ ಪೂರ್ವದಲ್ಲಿ ಆತನಿಂದ ಯಾವುದೇ ಜಾಮೀನುದಾರ ಅಥವಾ ಬಾಧ್ಯತೆ ಪಡೆದುಕೊಂಡಿರುವುದಿಲ್ಲ. ಸಾಮಾನ್ಯವಾಗಿ

ಯಾವುದೇ ಸಾಲವನ್ನು ನೀಡಬೇಕಾದರೆ ಅಡಮಾನ ಕರಾರು ಪತ್ರ ಅಥವಾ ಜಾಮೀನುದಾರ ಪಡೆದುಕೊಂಡು ಸಾಲ ಮಂಜೂರು ಮಾಡುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಲವು ರೂ.10 ಲಕ್ಷ ಒಳಗೆ ಇದ್ದರೆ ಯಾವುದೇ ಅಡಮಾನ ಅಥವಾ ಜಾಮೀನುದಾರ ಪಡೆದುಕೊಳ್ಳುವುದಿಲ್ಲ ಎಂದು ನುಡಿಯುತ್ತಾರೆ. ಸರಕಾರವು ಆರೋಪಿಯ ಹೆಸರಿನಲ್ಲಿ ಆ scheme ನಲ್ಲಿ ಸಾಲ ಮಂಜೂರು ಮಾಡಿದ್ದರಿಂದ ನಾವು ಆರೋಪಿಗೆ ಸಾಲ ನೀಡಿರುತ್ತೇವೆ ಎಂದರೆ ಸರಿಯಲ್ಲ.

3) ಆರೋಪಿಗೆ ಸಾಲವನ್ನು 2022 ಡಿಸೆಂಬರ ತಿಂಗಳಿನಲ್ಲಿ ಮಂಜೂರು ಮಾಡಿರುತ್ತೇವೆ. ರೂ.7,50,000/- ಸಾಲ 7 ವರ್ಷಗಳ ಸಾಲ ಅವಧಿಗೆ ಮಂಜೂರು ಮಾಡಿರುತ್ತೇವೆ. ಸಾಲದ ಅವಧಿ 2029 ರಲ್ಲಿ ಮುಗಿಯುತ್ತದೆ. ಸಾಲವನ್ನು ಪ್ರತಿ ತಿಂಗಳು ರೂ.20,135/- ರಂತೆ ಕಂತುಗಳಲ್ಲಿ ನೀಡಿರುತ್ತೇವೆ. ಆರೋಪಿಯು ರೂ.80,000/- ವರೆಗೆ ಮರು ಪಾವತಿ ಮಾಡಿರಬಹುದು. ಆರೋಪಿಯು ರೂ.2,47,992/- ಮರು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

4) ಸದರಿ ಸಾಲವನ್ನು ಆರೋಪಿಗೆ Tissue paper ತಯಾರು ಮಾಡುವ ಕುರಿತು ಮಂಜೂರು ಮಾಡಲಾಗಿರುತ್ತದೆ. ಯಂತ್ರ ಮತ್ತು ಸಾಮಗ್ರಿಗಳನ್ನು ಖರೀದಿಸಲು ರೂ.6,75,000/- ಮತ್ತು ಪಿಠೋಪಕರಣಳಿಗೆ ರೂ.54,000/-ಗಳು ಹೀಗೆ ಒಟ್ಟು ಸೇರಿ ರೂ.7,29,000/- ಮಂಜೂರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಇದನ್ನು ಹೊರತು ಪಡಿಸಿ ಬೇರೆ ಸಾಲವನ್ನು ಆರೋಪಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಸಾಲಕ್ಕೆ ಸಂಬಂಧಿಸಿದಂತೆ ಸರಕಾರದಿಂದ ರೂ.3,14,500/- ಅನುದಾನ ಬಂದಿರುತ್ತದೆ ಎಂದರೆ ಸರಿ.

5) ಆರೋಪಿಯು ಮರು ಪಾವತಿಸಿದ ರೂ.2,47,992/- ಮತ್ತು ಸರಕಾರದಿಂದ ಬಂದ ಅನುದಾನ ರೂ.3,14,500/- ಸೇರಿ ಆರೋಪಿತನ ಸಾಲದಲ್ಲಿ ಒಟ್ಟು ರೂ.5,62,492/- ಮರು ಪಾವತಿ ಆಗಿರುತ್ತದೆ ಎಂದರೆ ಸರಿಯಲ್ಲ.

ರೂ.1,66,502/–ಮರು ಪಾವತಿಸುವುದು ಬಾಕಿ ಇರುತ್ತದೆ ಎಂದರೆ ಸರಿಯಲ್ಲ. ಅದನ್ನು ಆರೋಪಿಯು ಮರು ಪಾವತಿಸಲು ತಯಾರು ಇದ್ದಾರೆ ಎಂದರೆ ಸರಿಯಲ್ಲ.

6) ಆರೋಪಿಯು ನಮ್ಮ ಬ್ಯಾಂಕಿಗೆ ಯಾವತ್ತೂ ಬಂದಿರುವುದಿಲ್ಲ ಮತ್ತು ನಿ ಸಿ 1ಚೆಕ್ಕ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ15,2025 ರ ಇಸವಿಯಲ್ಲಿ ಬಂದು ಆರೋಪಿಯು ನಿ ಸಿ 1 ನೀಡಿರುತ್ತಾರೆ. ನಿ ಸಿ 1 ಚೆಕ್ಕನ್ನು 16 ನೇ ದಿನಾಂಕದಂದು 2025 ಇಸವಿಯಲ್ಲಿ ಜಮಾ ಮಾಡಿರುತ್ತೇನೆ. ಯಾವ ತಿಂಗಳು ಹೇಳಲು ಆಗುವುದಿಲ್ಲ. ಚೆಕ್ಕ ನಂಬರ ಸಹ ನೆನಪಿರುವುದಿಲ್ಲ. ನಿ ಸಿ 1 ರ ಮೇಲೆ ನಮೂದು ಮಾಡಿರುವ ಮೊತ್ತ ನೆನಪಿರುವುದಿಲ್ಲ. ನಿ ಸಿ 1 ನ್ನು ನಗಧಿಕರಣಕ್ಕಾಗಿ ಎರಡು ಸಲ ಜಮಾ ಮಾಡಿರುತ್ತೇವೆ. ಮೊದಲನೆ ಬಾರಿ ಚೆಕ್ಕ ಅಮಾನ್ಯಯಾಗಿರುವ ಬಗ್ಗೆ ಆರೋಪಿಗೆ ನೋಟೀಸು ನೀಡಿರುತ್ತೇವೆ. ಸದರಿ ನೋಟೀಸನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ಎರಡನೇ ಬಾರಿಗೆ ಚೆಕ್ಕ ಅಮಾನ್ಯ ಆದ ನಂತರ ನೋಟೀಸು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ನಿ ಸಿ 6 ರಂತೆ ನೋಟೀಸು ನೀಡಿದ ನಂತರ ಆರೋಪಿಯು ನಮ್ಮ ಬ್ಯಾಂಕಿಗೆ ಬಂದು ಬೇಟಿಯಾಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಬ್ಯಾಂಕಿಗೆ ಬಂದು ಚೆಕ್ಕನ್ನು ಯಾಕೆ ಜಮಾ ಮಾಡಿರುತ್ತೀರಿ ಎಂದು ಹೇಳಿದರು ಎಂದರೆ ಸರಿಯಲ್ಲ, ಮುಂದೆ ನಾವು ಅದನ್ನು ಜಮಾ ಮಾಡಬೇಕಾಗುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

7) ನಿ ಸಿ 1 ನಗಧಿಕರಣಕ್ಕೆ ಜಮಾ ಮಾಡುವ ಪೂರ್ವದಲ್ಲಿ ಆರೋಪಿಗೆ ನೀಡಿರುವ ನೋಟೀಸುಗಳು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ನೋಟೀಸುಗಳು ಬ್ಯಾಂಕಿನ ಮುಖಾಂತರ ನೀಡಿರುತ್ತೇವೆ. ನಾವು ಯಾವುದೇ ನೋಟೀಸು ಕಳುಹಿಸಿರುವುದಿಲ್ಲ ಆದ ಕಾರಣ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಪ್ರತಿ ತಿಂಗಳು ಕಂತುಗಳು ಸರಿಯಾಗಿ ಕಟ್ಟಿದ್ದರಿಂದ ಯಾವುದೇ ನೋಟೀಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

8) ನಿ ಸಿ 1 ನಮ್ಮ ಬ್ಯಾಂಕಿನ ಚೆಕ್ಕ ಆಗಿರುತ್ತದೆ ಎಂದರೆ ಸರಿ. ನಿ ಸಿ 1 ರ ಮೇಲೆ ಬರೆದಿರುವ ಅಕ್ಷರಗಳು ಆರೋಪಿಯ ಕೈಬರಹದ್ದು ಆಗಿರುವುದಿಲ್ಲ ಎಂದರೆ ನನಗೆ

ಗೊತ್ತಿಲ್ಲ. ನಿ ಸಿ 1ಎ ಆರೋಪಿಯ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿ ಸಿ 1ಎ ಮತ್ತು ನಿ ಸಿ 8 ರ ಮೇಲೆ ಇರುವ ಸಹಿ ಮತ್ತು ನಿ ಸಿ1ಎ ಸಹಿ ಬೇರೆ ಬೇರೆ ಆಗಿರುತ್ತದೆ ಎಂದರೆ ಸರಿಯಲ್ಲ. ನಿ ಸಿ1 ನಮ್ಮ ಬ್ಯಾಂಕಿನ ಚೆಕ್ಕ ಆಗಿದ್ದರಿಂದ ಆರೋಪಿಯ ಖೊಟ್ಟಿ ಸಹಿಯನ್ನು ಮಾಡಿ ಪ್ರಸ್ತುತ ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಸಿ 2 ಮತ್ತು 3 ರ ಮೇಲೆ ಠೇವಣಿ ಮಾಡಿರುವ ವ್ಯಕ್ತಿಯ ಸಹಿ ನಮೂದು ಮಾಡಿರುವುದಿಲ್ಲ ಎಂದರೆ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಚೆಕ್ಕ ಜಮಾ ಮಾಡುವ ಕಾಲಕ್ಕೆ ಠೇವಣಿ ಮಾಡುವವರ ಸಹಿ ಕಡ್ಡಾಯವಾಗಿರುತ್ತದೆ ಎಂದರೆ ಸರಿಯಲ್ಲ. ನಿಸಿ1ಎ ನನ್ನ ಸಮಕ್ಷಮ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಲದ ಅವಧಿ 2029 ವರೆಗೆ ಇದ್ದು ಅಲ್ಲಿಯವರೆಗೆ ಆರೋಪಿಯ ವಿರುದ್ಧ ಸಿವಿಲ್ ವ್ಯಾಜ್ಯ ದಾಖಲಿಸಲು ಆಗುವುದಿಲ್ಲ ಎನ್ನುವ ಕಾರಣಕ್ಕೆ ಪ್ರಸ್ತುತ ಸುಳ್ಳು ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸರಕಾರದಿಂದ ಮಂಜೂರು ಆಗಿರುವ ಸಾಲಕ್ಕೆ 12.5% ಬಡ್ಡಿ ದರ ಇರುತ್ತದೆ ಮತ್ತು ಅದು ಹೆಚ್ಚು ಕಡಿಮೆ ಆಗುತ್ತದೆ. PMEGP scheme ಆಗಿದ್ದರಿಂದ 4.00% ಬಡ್ಡಿ ಇರುತ್ತದೆ ಎಂದರೆ ಸರಿಯಲ್ಲ.

9) ದೂರಿನಲ್ಲಿ ಬರೆದಿರುವ ಆಪಾದನೆಗಳು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ಸುಳ್ಳು ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನಿ ಸಿ 1 ರಂತೆ ಯಾವುದೇ ಚೆಕ್ಕ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರೂ.1,66,502/- ಸಾಲ ಹೂರತು ಪಡಿಸಿ ಆರೋಪಿಯು ಬೇರೆ ಯಾವುದೇ ಸಾಲ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ